ಮಹಾದಾದಿ ದೇವ ನಮೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 131.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 447.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 210.
4. **Note:** Lyrics given without highlights are mainly as per Ref. 2. The wordings in Ref. 3 are same as in Ref. 2 with few minor differences which are not considered here. The wordings in Ref. 1 are almost matching with few differences which are mentioned in yellow highlights.
5. **Note:** Singer has followed lyrics as in Ref. 2.

ರಾಗ ನಟ್ಟ ತಾಳ ಆದಿ

ಮಹಾದಾದಿ ದೇವ ನಮೋ || ಪ ||

ಮಹಾದಾದಿ ದೇವ ನಮೋ, ಮಹಾ ಮಹಿಮನೆ ನಮೋ
ಪ್ರಹಲ್ಲಾದ ವರದ ಅಹೋಬಲ ನಾರಸಿಂಹ || ಅಪ ||

ಧರಣಿಗುಬ್ಬಸವಾಗೆ ತಾರಾ ಪಥವು ನಡುಗೆ ತರಣಿಗುಬ್ಬಸವಾಗೆ ತಾರಾ ಪತಿಯು ನಡುಗೆ
ಸುರರು ಕಂಗೆಟ್ಟೋಡೆ ನಭವ ಬಿಟ್ಟು
ತರು ಗಿರಿಗಳಲ್ಲಾಡೆ ಶರಧಿಗಳು ಕುದಿದುಕ್ಕೆ
ಉರಿಯನುಗುಳುತ ಉದ್ಭವಿಸಿದೆಯೊ ನಾರಸಿಂಹ || 1 ||

ಸಿಡಿಲಂತೆ ಗರ್ಜಿಸುತ ಕುಡಿಯ ನಾಲಗೆ ಚಾಚಿ
ಅಡಿಗಡಿಗೆ (ಲಂಘಿಸುತ) ಕಡು ಕೋಪದಿಂದ (ಹುಂಕರಿಸಿ)
ಮುಡಿವಿಡಿದು ರಕ್ಕಸನ ಕೆಡಹಿ ನಖದಿಂದೊತ್ತಿ
ಬಿಡದೊಡಲ ಬಗೆದೆ ಕಡುಗಲಿ ನಾರಸಿಂಹ || 2 ||

ಸರಸಿಜೋದ್ಭವ ಹರ ಪುರಂದರಾದಿ ಸಮಸ್ತ
ಸುರರು ಅಂಬರದಿ ಪೂ ಮಳೆಗೆರೆಯಲು
ಸಿರಿ ಸಹಿತ ಗರುಡಾದ್ರಿಯಲಿ ನಿಂತು ಭಕುತರನು
ಕರುಣಿಸುವ ಪುರಂದರ ವಿಠಲ ನಾರಸಿಂಹ || 3 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ತರಣಿ = ಸೂರ್ಯ

ತಾರಾಪತಿ = ಚಂದ್ರ

ಧರಣಿಗುಬ್ಬಸವಾಗೆ – ಭೂಮಿಯು ಉಬ್ಬಸ ಬಂದಂತೆ ತಲ್ಲಣಿಸಲು.

ತಾರಾಪಥವು – ನಕ್ಷತ್ರಗಳು ಕೂಡಿಕೊಂಡಿರುವ ಆಕಾಶಗಂಗೆ.

ನಭವ – ಆಕಾಶವನ್ನು.

ತರು ಗಿರಿಗಳು – ಮರಗಳು, ಬೆಟ್ಟಗಳು.

ಶರಧಿಗಳು – ಸಮುದ್ರಗಳು.

ಲಂಘಿಸುತ – ಹಾರಿ ಕುಪ್ಪಳಿಸುತ್ತ.

ಮುಡಿ ಪಿಡಿದು – ರಾಕ್ಷಸನ ತಲೆಗೂದಲನ್ನು ಹಿಡಿದು.

ಸರಸಿಜೋದ್ಭವ ಹರ ಪುರಂದರಾದಿ – ಬ್ರಹ್ಮ, ಶಿವ, ಇಂದ್ರ ಮೊದಲಾದ.

ಪುರಂದರ = ಇಂದ್ರ

ಗರುಡಾದ್ರಿ = ಅಹೋಬಲದಲ್ಲಿರುವ ಮೂರು ಬೆಟ್ಟಗಳಲ್ಲಿ ಒಂದು

Classification: Keerthane
Ankita: purandara vittala
Location: Ahobala, near Kurnool, AP
Category: Narasimha Stuti, Pooja Tatva

Sub-Category: prahallada, Narasimha, ahobala, bhumi, sura, Samudra, nalige, sittu, akasha, nara,

Pravachana: NA

Explanation: NA